All India Radio: Bangalore
National Bulletin In Kannada
21.09.2025 : 7.35hrs
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

21.09.2025 : 7.35hrs
ಮುಖ್ಯಾಂಶಗಳು

೧. ದೇಶದ ಅತಿದೊಡ್ಡ ಶತ್ರು, ವಿದೇಶಗಳ ಮೇಲಿನ ಅವಲಂಬನೆ: ಅದನ್ನು ಗೆಲ್ಲಲು ಆತ್ಮನಿರ್ಭರ ಭಾರತಕ್ಕೆ ಒತ್ತು: ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದನೆ

೨. ಬರುವ ಮಾರ್ಚ್ ವೇಳೆಗೆ ದೇಶದಿಂದ ಎಡಪಂಥೀಯ ಉಗ್ರವಾದ ಸಂಪೂರ್ಣ ನಿರ್ಮೂಲನೆ -ಕೇಂದ್ರ ಗೃಹ ಸಚಿವ ಅಮಿತ್ ಶಾ

೩. ಎಚ್-೧ಬಿ ವೀಸಾಕ್ಕೆ ಲಕ್ಷ ಡಾಲರ್ ಶುಲ್ಕ ವಿಧಿಸುವ ಅಮೆರಿಕದ ನಿರ್ಧಾರದ ಪರಿಣಾಮಗಳ ಬಗ್ಗೆ ಪರಿಶೀಲನೆ -ಭಾರತ ಹೇಳಿಕೆ

೪. ೨೦೨೩ನೇ ಸಾಲಿನ ಪ್ರತಿಷ್ಠಿತ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಗೆ ಮಲೆಯಾಳಂನ ಖ್ಯಾತ ನಟ, ನಿರ್ದೇಶಕ ಮೋಹನ್ ಲಾಲ್ ಆಯ್ಕೆ.

೫. ಏಷ್ಯಾ ಕಪ್ ಟಿ-೨೦ ಕ್ರಿಕೆಟ್: ಸೂಪರ್ ನಾಲ್ಕರ ಪಂದ್ಯದಲ್ಲಿಂದು ಭಾರತ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನದ ವಿರುದ್ಧ ಸೆಣಸು

><><><><><><

ದೇಶದ ಅತಿದೊಡ್ಡ ಶತ್ರು ವಿದೇಶಗಳ ಮೇಲಿನ ಅವಲಂಬನೆಯಾಗಿದ್ದು, ರಾಷ್ಟ್ರವು ಅದನ್ನು ಗೆಲ್ಲಬೇಕು, ಅದಕ್ಕಾಗಿಯೇ ಆತ್ಮನಿರ್ಭರ ಭಾರತಕ್ಕೆ ಒತ್ತು ನಿಡಲಾಗಿದೆ ಪ್ರಧಾನಿ ನರೇಂದ್ರ ಮೋದಿ ಬಲವಾಗಿ ಪ್ರತಿಪಾದಿಸಿದ್ದಾರೆ. ಗುಜರಾತ್‌ನಲ್ಲಿ ನಿನ್ನೆ 'ಸಮುದ್ರದಿಂದ ಸಮೃದ್ಧಿ' ಕಾರ್ಯಕ್ರಮದಲ್ಲಿ

ಮಾತನಾಡಿ, ಸೆಮಿಕಂಡಕ್ಟರ್ ಚಿಪ್‌ಗಳಿಂದ ಹಿಡಿದು ಹಡಗುಗಳವರೆಗೆ ಎಲ್ಲಾ ವಲಯಗಳಲ್ಲಿ ದೇಶೀಯ ಉತ್ಪಾದನೆಯ ಮಹತ್ವವನ್ನು ಒತ್ತಿ ಹೇಳಿದರು. ೪೦ ಕೋಟಿ ಭಾರತೀಯರ ಭವಿಷ್ಯ ಹೊರಿಗಿ ಶಕ್ತಿಗಳ ಕೈಯಲ್ಲಿ ಬಿಡಲು ಸಾಧ್ಯವಿಲ್ಲ ಮತ್ತು ರಾಷ್ಟ್ರೀಯ ಅಭಿವೃದ್ಧಿಯ ಬದ್ಧತೆಯು ವಿದೇಶಿ ಅವಲಂಬನೆಯನ್ನು ತಗ್ಗಿಸಬೇಕಾಗಿದೆ. ನೂರು ಸಮಸ್ಯೆಗಳಿಗೆ ಪರಿಹಾರವೆಂದರೆ ಒಂದೇ, ಅದೇ ಆತ್ಮನಿರ್ಭರ ಭಾರತವನ್ನು ನಿರ್ಮಿಸುವುದು ಎಂದರು.  ಅದನ್ನು ಸಾಧಿಸಲು, ಭಾರತವು ಹಲವು ಸವಾಲುಗಳನ್ನು ಎದುರಿಸಬೇಕು, ಬಾಹ್ಯ ಅವಲಂಬನೆಯನ್ನು ತಗ್ಗಿಸಬೇಕು ಮತ್ತು ನಿಜವಾದ ಸ್ವಾವಲಂಬನೆಯನ್ನು ಸಾಧಿಸಬೇಕು ಎಂದು ಪ್ರಧಾನಿ ಒತ್ತಿ ಹೇಳಿದರು.

ಬೈಟ್: ಪ್ರಧಾನಿ ನರೇಂದ್ರ ಮೋದಿ (೨೯ ಸೆಕೆಂಡ್)

೨೦೪೭ರ ವೇಳೆಗೆ ಅಭಿವೃದ್ಧಿ ಹೊಂದಿದ ಭಾರತದ ಕನಸನ್ನು ಸಾಕಾರಗೊಳಿಸಲು ಭಾರತವು ಸ್ವಾವಲಂಬಿ ರಾಷ್ಟ್ರವಾಗಿ ವಿಶ್ವದ ಮುಂದೆ ನಿಲ್ಲುವ ಸಮಯ ಬಂದಿದೆ. ಜಾಗತಿಕ ಶಾಂತಿ, ಸ್ಥಿರತೆ ಮತ್ತು ಸಮೃದ್ಧಿಗಾಗಿ, ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶವು ಸ್ವಾವಲಂಬಿಯಾಗಬೇಕು ಎಂದು ಅವರು ಹೇಳಿದರು.  ಭಾರತವನ್ನು ಸಾಗರ ಮಹಾಶಕ್ತಿಯನ್ನಾಗಿ ಮಾಡುವ ತಮ್ಮ ಸರ್ಕಾರದ ದೂರದೃಷ್ಟಿಯನ್ನು ಅನಾವರಣಗೊಳಿಸಿದ ಪ್ರಧಾನಿ, ೨೦೪೭ರ ವೇಳೆಗೆ ಜಾಗತಿಕ ಕಡಲ ವ್ಯಾಪಾರದಲ್ಲಿ ತನ್ನ ಪಾಲನ್ನು ಮೂರು ಪಟ್ಟು ಹೆಚ್ಚಿಸುವ ಗುರಿಯನ್ನು ಹೊಂದಿದ್ದಾರೆ ಎಂದು ಹೇಳಿದರು. ಭಾರತದ ಕರಾವಳಿಗಳು ಸದಾ ಸಮೃದ್ಧಿಯ ಸಂಕೇತವಾಗಿದೆ ಮತ್ತು ಈಗ ಅದರ ಸಮುದ್ರ ತೀರಗಳು ಭಾರತದ ಭವಿಷ್ಯದ ಬೆಳವಣಿಗೆಯ ಹೆಬ್ಬಾಗಿಲುಗಳಾಗಲಿವೆ. ಭಾರತದ ಸಾಗರ ವಲಯವು ಮುಂದಿನ ಪೀಳಿಗೆಯ ಸುಧಾರಣೆಗಳಿಗೆ ಒಳಗಾಗುತ್ತಿದೆ ಎಂದು ಪ್ರಧಾನಿ ಹೇಳಿದರು.  ದೇಶಾದ್ಯಂತ ಬಂದರು ಕಾರ್ಯವಿಧಾನಗಳನ್ನು

ಸರಳಗೊಳಿಸುವ ಗುರಿ ಹೊಂದಿರುವ ಈ ವಲಯವು ಶೀಘ್ರದಲ್ಲೇ "ಒಂದು ರಾಷ್ಟ್ರ, ಒಂದು ಬಂದರು ಕಾರ್ಯವಿಧಾನ"ವನ್ನು ಅಳವಡಿಸಿಕೊಳ್ಳಲಿದೆ ಎಂದು ಅವರು ಘೋಷಿಸಿದರು.

><><><><><

ಮುಂದಿನ ವರ್ಷದ ಮಾರ್ಚ್ ವೇಳೆಗೆ ದೇಶದಿಂದ ಎಡಪಂಥೀಯ ಉಗ್ರವಾದವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.  ಖಾಸಗಿ ವಾಹಿನಿಗೆ ನೀಡಿದ ಸಂದರ್ಶನದಲ್ಲಿ ಅವರು, ಈಶಾನ್ಯ ಮತ್ತು ಎಡಪಂಥೀಯ ಉಗ್ರವಾದ ಬಾಧಿತ ಪ್ರದೇಶಗಳು ಸೇರಿದಂತೆ ಮೂರು ಪ್ರಮುಖ ಪ್ರದೇಶಗಳಲ್ಲಿ ಕಳೆದ ದಶಕದಲ್ಲಿ ಸರ್ಕಾರದ ಪ್ರಯತ್ನಗಳಿಂದಾಗಿ ಹಿಂಸಾಚಾರದ ಘಟನೆಗಳು ಶೇಕಡ ೭೫ ರಷ್ಟು ತಗ್ಗಿಸಿವೆ ಎಂದರು

ಧ್ವನಿ: ಅಮಿತ್ ಶಾ (೨೪ ಸೆಕೆಂಡ್)

ನರೇಂದ್ರ ಮೋದಿ ಸರ್ಕಾರದ ಸಾಧನೆಗಳನ್ನು ಪ್ರಮುಖವಾಗಿ ಪ್ರಸ್ತಾಪಿಸಿದ ಸಚಿವರು, ೧೧ ವರ್ಷಗಳಿಗಿಂತ ಕಡಿಮೆ ಅವಧಿಯಲ್ಲಿ, ಸರ್ಕಾರವು ೬೦ ಕೋಟಿ ಜನರಿಗೆ ೫ ಲಕ್ಷ ರೂಪಾಯಿ ಮೌಲ್ಯದ ವಸತಿ, ವಿದ್ಯುತ್, ಶೌಚಾಲಯ, ಅನಿಲ, ಕುಡಿಯುವ ನೀರು ಮತ್ತು ಆರೋಗ್ಯ ರಕ್ಷಣೆಯನ್ನು ಒದಗಿಸಿದೆ ಎಂದು ಹೇಳಿದರು.

><><><><><

ಎಚ್-೧ಬಿ ವೀಸಾ ಅರ್ಜಿಗಳ ಮೇಲೆ ಲಕ್ಷ ಡಾಲರ್ ಶುಲ್ಕ ವಿಧಿಸುವ ಅಮೆರಿಕದ ನಿರ್ಧಾರದ ಪರಿಣಾಮಗಳನ್ನು ಪರಿಶೀಲಿಸುತ್ತಿರುವುದಾಗಿ ಭಾರತ ಹೇಳಿದೆ. ಅಮೆರಿಕದ ಎಚ್-೧ಬಿ ವೀಸಾ ಕಾರ್ಯಕ್ರಮದ ಮೇಲಿನ ಉದ್ದೇಶಿತ ನಿರ್ಬಂಧಗಳಿಗೆ ಸಂಬಂಧಿಸಿದ ಈ ಕ್ರಮದ ಸಂಪೂರ್ಣ ಪರಿಣಾಮಗಳನ್ನು ಭಾರತೀಯ ಕೈಗಾರಿಕೆಗಳು ಸೇರಿ ಸಂಬಂಧಪಟ್ಟ ಎಲ್ಲರೂ ಅಧ್ಯಯನ

ಮಾಡುತ್ತಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ. ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಮ್ಮ ಹೇಳಿಕೆಯಲ್ಲಿ, ಭಾರತ ಮತ್ತು ಅಮೆರಿಕ ಎರಡೂ ದೇಶಗಳ ಉದ್ಯಮಗಳು ನಾವೀನ್ಯತೆ ಮತ್ತು ಸೃಜನಶೀಲತೆಯಲ್ಲಿ ಪಾಲನ್ನು ಹೊಂದಿವೆ ಮತ್ತು ಮುಂದಿನ ಉತ್ತಮ ಮಾರ್ಗದ ಕುರಿತು ಸಮಾಲೋಚಿಸುವ ನಿರೀಕ್ಷೆಯಿದೆ ಎಂದು ಹೇಳಿದರು.

><><><><><

ಈ ಮಧ್ಯೆ, ತಂತ್ರಜ್ಞಾನ ಉದ್ಯಮದಲ್ಲಿ ಗೊಂದಲ ಮತ್ತು ಭೀತಿಯನ್ನು ಉಂಟುಮಾಡಿದ ಅಮೆರಿಕಾದ ಹೊಸ ಎಚ್-೧ಬಿ ವೀಸಾ ನೀತಿಯ ಕುರಿತು ಶ್ವೇತಭವನವು ಪ್ರಮುಖ ಸ್ಪಷ್ಟೀಕರಣವನ್ನು ನೀಡಿದ್ದು, ಒಂದು ಲಕ್ಷ ಡಾಲರ್ ಶುಲ್ಕವು ಹೊಸ ಅರ್ಜಿದಾರರಿಗೆ ಮಾತ್ರ "ಒಂದು ಬಾರಿ" ವಿಧಿಸಲಾಗುವ ಶುಲ್ಕವಾಗಿರುತ್ತದೆ ಎಂದು ಹೇಳಿದೆ. ಹೊಸ ನೀತಿ ಜಾರಿಗೆ ಬರಲು ಕೆಲವು ಗಂಟೆಗಳ ಮುನ್ನ  ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕ್ಯಾರೋಲಿನ್ ಲೀವಿಟ್ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಸ್ಪಷ್ಟೀಕರಣವನ್ನು ನೀಡಿದರು. ಈಗಾಗಲೇ ಎಚ್೧-ಬಿ ವೀಸಾಗಳನ್ನು ಹೊಂದಿರುವವರು ಮತ್ತು ಪ್ರಸ್ತುತ ದೇಶದ ಹೊರಗಿರುವವರಿಗೆ ಮರು-ಪ್ರವೇಶಿಸಲು ಒಂದು ಲಕ್ಷ ಡಾಲರ್ ಶುಲ್ಕ ವಿಧಿಸಲಾಗುವುದಿಲ್ಲ. ಇದು ನವೀಕರಣಗಳು ಅಥವಾ ಸದ್ಯ ವೀಸಾ ಹೊಂದಿರುವವರ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ತಿಳಿಸಿದ್ದಾರೆ.

><><><><><

ಮಲೆಯಾಳಂನ ಖ್ಯಾತ ನಟ, ನಿರ್ದೇಶಕ ಮತ್ತು ನಿರ್ಮಾಪಕ ಮೋಹನ್ ಲಾಲ್ ೨೦೨೩ನೇ ಸಾಲಿನ ಪ್ರತಿಷ್ಠಿತ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಗೆ ಆಯ್ಕೆಯಗಿದ್ದಾರೆ. ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಆಯ್ಕೆ ಸಮಿತಿಯ ಶಿಫಾರಸಿನ ಮೇರೆಗೆ, ಭಾರತೀಯ ಚಿತ್ರರಂಗಕ್ಕೆ ಅಪ್ರತಿಮ ಕೊಡುಗೆ ನೀಡಿರುವ ಮಲಯಾಳಂ ನಟನಿಗೆ ಪ್ರಶಸ್ತಿಯನ್ನು ನೀಡಲು ಸರ್ಕಾರ ನಿರ್ಧರಿಸಿದೆ ಎಂದು ಕೇಂದ್ರ

ವಾರ್ತಾ ಮತ್ತು ಪ್ರಸಾರ ಸಚಿವಾಲಯ ತಿಳಿಸಿದೆ. ಪ್ರತಿಷ್ಠಿತ ಪ್ರಶಸ್ತಿಗೆ ಆಯ್ಕೆಯಾಗಿರುವ ಮೋಹನ್ ಲಾಲ್ ಅವರನ್ನು ವಾರ್ತಾ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಅಭಿನಂದಿಸಿದ್ದಾರೆ. ಚಿಕ್ಕ ವಯಸ್ಸಿನಲ್ಲಿಯೇ ತಮ್ಮ ಚಲನಚಿತ್ರ ಪಯಣವನ್ನು ಆರಂಭಿಸಿದ ಮೋಹನ್ ಲಾಲ್ ಮಲಯಾಳಂ, ತಮಿಳು, ತೆಲುಗು, ಕನ್ನಡ ಮತ್ತು ಹಿಂದಿ ಚಲನಚಿತ್ರಗಳಲ್ಲಿ ನಟಿಸಿದ್ದಾರೆ. ಮೋಹನ್ ಲಾಲ್ ಅವರ ಸಿನಿ ಪಯಣವು ಮುಂದಿನ ಪೀಳಿಗೆಗಳಿಗೆ ಸ್ಫೂರ್ತಿ ನೀಡುತ್ತದೆ ಮತ್ತು ಅವರ ಅಪ್ರತಿಮ ಪ್ರತಿಭೆ, ಬಹುಮುಖಿ ವ್ಯಕಿತ್ವ ಮತ್ತು ನಿರಂತರ ಕಠಿಣ ಪರಿಶ್ರಮವು ದೇಶದ ಚಲನಚಿತ್ರ ಇತಿಹಾಸದಲ್ಲಿ ಹೊಸ ಮಾನದಂಡ ಸ್ಥಾಪಿಸಿದೆ. ಕೇಂದ್ರ ಸರ್ಕಾರವು ಈ ಹಿಂದೆ ೨೦೦೧ರಲ್ಲಿ ಪದ್ಮಶ್ರೀ ಮತ್ತು ೨೦೧೯ರಲ್ಲಿ ಪದ್ಮಭೂಷಣ ಪ್ರಶಸ್ತಿಗಳನ್ನು ನೀಡಿ ಗೌರವಿಸಿತ್ತು. ಇದೇ ೨೩ ರಂದು ನವದೆಹಲಿಯಲ್ಲಿ ನಡೆಯಲಿರುವ ೭೧ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಟನಿಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪ್ರದಾನ ಮಾಡಲಾಗುವುದು.

><><><><><

ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದ ಧ್ಯೇಯದೊಂದಿಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ದೇಶದಲ್ಲಿ ಪರಿವರ್ತನೆ ಮತ್ತು ಪ್ರಗತಿಯನ್ನು ತರಲು ಅವಿರತವಾಗಿ ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ ಆಕಾಶವಾಣಿ ಪ್ರಸ್ತುತಪಡಿಸುತ್ತಿರುವ ವಿಶೇಷ ಸರಣಿ - "ಸೇವಾ ಪರ್ವ" ದಲ್ಲಿಂದು, ಕೇಂದ್ರ ಸರ್ಕಾರದ ನೇತೃತ್ವದಲ್ಲಿ ಯುಪಿಐ ಮೂಲಕ ಡಿಜಿಟಲ್ ಪಾವತಿಯ ಕ್ರಾಂತಿ ಎಂಬುವುದರ ಕುರಿತ ಒಂದು ವಿಶೇಷ ವರದಿ ಇದೀಗ ಮೂಡಿಬರಲಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತ ತಂತ್ರಜ್ಞಾನ ಚಾಲಿತ ಪರಿವರ್ತನೆಗೆ ಸಾಕ್ಷಿಯಾಗಿದೆ. ೨೦೧೬ ರಲ್ಲಿ ಭಾರತೀಯ ರಾಷ್ಟ್ರೀಯ ಪಾವತಿ ನಿಗಮದಿಂದ ಪ್ರಾರಂಭಿಸಲ್ಪಟ್ಟ ಯುಪಿಐ, ಹಲವು ಬ್ಯಾಂಕ್ ಖಾತೆಗಳನ್ನು ಒಂದೇ ಮೊಬೈಲ್ ಅಪ್ಲಿಕೇಶನ್‌ಗೆ ಸಂಯೋಜಿಸುವ ಮೂಲಕ ದೇಶದ ಪಾವತಿ ಪರಿಸರವ್ಯವಸ್ಥೆಯಲ್ಲಿ ಕ್ರಾಂತಿಯನ್ನುಂಟು ಮಾಡಿದೆ. ಈ ವ್ಯವಸ್ಥೆಯು ತಡೆರಹಿತ ಹಣ

ವರ್ಗಾವಣೆ, ವ್ಯಾಪಾರ ವಹಿವಾಟುಗಳು ಮತ್ತು ಪೀರ್-ಟು-ಪೀರ್ ವಹಿವಾಟುಗಳನ್ನು ಸಕ್ರಿಯಗೊಳಿಸಿದೆ. ಈ ವರ್ಷದ ಸ್ವಾತಂತ್ರ್ಯ ದಿನಾಚರಣೆಯ ಭಾಷಣದಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರು ಯುಪಿಐನ ಶಕ್ತಿಯ ಬಗ್ಗೆ ಮಾತನಾಡಿದ್ದರು. ಇಂದು ಯುಪಿಐನ ವ್ಯಾಪ್ತಿ ಗಮನಾರ್ಹವಾಗಿ ವಿಸ್ತರಿಸಿದೆ. ಕೇವಲ ೨೦೨೫ರ ಆಗಸ್ಟ್ ನಲ್ಲಿ ಯುಪಿಐ ೨೦ ಶತಕೋಟಿ ವಹಿವಾಟುಗಳನ್ನು ಮೀರಿದೆ.

><><><><><

ಏಷ್ಯಾ ಕಪ್ ಟಿ-೨೦ ಕ್ರಿಕೆಟ್‌ನಲ್ಲಿ, ಭಾರತ ಇಂದು ದುಬೈನಲ್ಲಿ ನಡೆಯಲಿರುವ ಎರಡನೇ ಸೂಪರ್ ನಾಲ್ಕರ ಪಂದ್ಯದಲ್ಲಿ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನದ ವಿರುದ್ಧ ಸೆಣೆಸಲಿದೆ. ಪಂದ್ಯವು ಭಾರತೀಯ ಕಾಲಮಾನ ರಾತ್ರಿ ೮ ಗಂಟೆಗೆ ಆರಂಭವಾಗಲಿದೆ. ಈ ಪಂದ್ಯಾವಳಿಯಲ್ಲಿ ಉಭಯ ತಂಡಗಳ ನಡುವಿನ ಎರಡನೇ ಮುಖಾಮುಖಿ ಇದಾಗಿದೆ.

><><>END<><><><